# ಅಧ್ಯಾಯ 21

**ಓಂ ಗಣೇಶಾಯ ನಮಃ     ಸದ್ಗುರು ಸಿದ್ಧಾರೂಢ ನಮಃ**



| ಛಂದ | ಸರ್ವದೇವರ ರೂಪದಿಂದಲೇ ನೀನು ಸದ್ಗುರು ಇರುತಿಹೆ
ಗರ್ವವನು ನೀ ಹರಣ ಮಾಡಿಯೆ  ಜನರ ಭಕ್ತಿಗೆ ತರುತಿಹೆ| ಭಕ್ತಿಯಿಂದಲೆ
ಒಲಿಯುವದರಿಂದ  ನಿನ್ನ ನಾಮವು ಜಪಿಸುವೆ ಮುಕ್ತಿಯಂ ಬೇಡೆಂದು
ಪಾದದ ಸೇವೆಯನುನಾ೦ ಬಯಸುವೆ..

ಹೇ ಸದ್ಗುರುವೇ , ನಿನ್ನ  ರೂಪವು

ನಿಗಮಾಗಮಾತೀತವಾದದ್ದು. ಅದಕ್ಕೆ

ಚಿತ್ಸ್ವ ರೂಪವನ್ನುತ್ತಾರೆ. ಆ ನಿನ್ನ ಸ್ವರೂಪವು

ಜಗನ್ಮಯವಾಗಿದ್ದರೂ, ನಿರ್ಲೇಪವಿದ್ದು , ಪುಣ್ಯ ಪಾಪಗಳು

ಅದಕ್ಕೆ  ಹತ್ತುವದಿಲ್ಲ. ಶಬ್ದಗಳ ಘಟಾಟೋಪಗಳು

ಕಲ್ಪಿತವಾಗಿದ್ದು, ಅವು ಬರೆ ವಾಚರಂಭಣ ಅನ್ನಲ್ಪಡುತ್ತ

ನಿರ್ವಿಕಾರವಾದ ಚೈತನ್ಯವು, ಇವಕ್ಕೆಲ್ಲಾ ಅತೀತವಾಗಿ

ಇರುವದು. ಎಲ್ಲಿ  ಪರ್ಯಂತ ವಿಮಳ ಜ್ಞಾನವಾಗಿಲ್ಲವೋ,

ಅಲ್ಲಿವರೆಗೆ ಈ ಜಗದ್ಭಾನವು ಸತ್ಯವಾಗಿ ಕಾಣಿಸುವದು.

ಜ್ಞಾನದಿಂದಲೇ  ಆ ನಿರ್ವಾಣ ಸ್ಥಿತಿಯನ್ನು  ಜೀವನು ಹೊಂದಿ,

ದ್ವೈತ  ಭಾವವನ್ನು  ಕಳಕೊಳ್ಳುತ್ತಾನೆ. ಬ್ರಹ್ಮಜ್ಞಾನದ

ಮಹಿಮಾ ಅಗಾಧವಾಗಿದ್ದು, ಶಂಕರ ಪಾರ್ವತಿ ಸಹಾ

ತಿಳಿಯಲಾರರು. ಅಜ್ಞನಾದ ಜೀವಾತ್ಮನು  ಗುರುಕೃಪೆ ಆಗದ

ವಿನಹ ಹ್ಯಾಗೆ ತಿಳಿದುಕೊಳ್ಳುವನು? ಬ್ರಹ್ಮಜ್ಞಾನದಿಂದ ದ್ವೈತ

ನಿರಸನವಾಗುವದು. ದ್ವೈತದ  ಅಭಾವದಿಂದ ಆನಂದ ಪ್ರಾಪ್ತಿ.

ಆಮೇಲೆ ಜೀವನು, ಬರೋಣ ಹೋಗೋಣಗಳಿಲ್ಲದೆ, ನಿತ್ಯ

ನಿರಾಕಾರ ಸ್ವರೂಪನೇ ಆಗಿರುತ್ತಾನೆ. ದೇಹ ಬುದ್ಧಿಯ ಯೋಗದಿಂದ ಮನಸ್ಸು ನಿರಾಕಾರ ಸ್ಥಾನಕ್ಕೆ ಪ್ರಾಪ್ತವಾಗಲೊಲ್ಲದು. ಅದಕ್ಕೆ ನಾಮರೂಪಗಳಲ್ಲಿಯೇ ತಿರುಗುತ್ತಿರುವ ಚಟವಿದ್ದು, ನಿರ್ಗುಣದಲ್ಲಿ ಹೋಗಲಿಕ್ಕೆ ಅದು ಹೆದರುವದು. ಹಾಗಾದರೆ, ಅದಕ್ಕೆ ಸದ್ಗುರು ನಾಮ ಚಿಂತನೆಯನ್ನು ಹಚ್ಚಿ , ಅಭ್ಯಾಸ ಬಲದಿಂದ ಯಾವಾಗಲೂ, ಆತನ ರೂಪ ಗುಣಗಳನ್ನು ಧ್ಯಾನಿಸುತ್ತಾ ಇರುವುದರಿಂದ ಮನಸ್ಸಿನೊಳಗಿನ ದ್ವೈತಭಾವವು ಹೋಗುವುದು. ಚಿಂತನ ಮಾತ್ರದಿಂದ ಸದ್ಗುರು ರೂಪದಲ್ಲಿ ಅದ್ವೈತ ಭಾವವು ತಾನೇ ಆಗುವುದು. ಅನಂತರ ಸೋಹಂಭಾವ ಉತ್ಪನ್ನವಾಗುವದು. ಅದನ್ನು ಎಲ್ಲಾ ಕಡೆಯಲ್ಲಿ ನಾಮ ರೂಪಗಳ ಮೇಲೆ ಯೋಜಿಸಬೇಕು. ಈ ಪ್ರಕಾರ ನಿತ್ಯ ಅಭ್ಯಾಸ ಮಾಡುವದರಿಂದ ಅವಶ್ಯವಾಗಿ ನಿರಾಕಾರ ಚೈತನ್ಯವು ಭಾಸಮಾನವಾಗುವದು. ಇಂಥಾ ಚೈತನ್ಯ ಭಾಸವು ತನ್ನ ಶರೀರಕ್ಕೆ ಹಚ್ಚುವುದರಿಂದ ಸ್ವರೂಪವು ಪ್ರಕಾಶಿಸುವದು. ಆದ್ದರಿಂದ ಶರೀರಕ್ಕೆ ಬೇರೆಯಾಗಿ, ಸ್ಥೂಲ ಸೂಕ್ಷ್ಮ ದೇಹಗಳನ್ನು

ನೋಡುವಂಥವನಾಗಿ, ಸಾಕ್ಷಿ ಚೈತನ್ಯದಲ್ಲಿ ಐಕ್ಯನಾಗಿದ್ದು ತನ್ನ ಸ್ವಸ್ಥಾನಕ್ಕೆ ಬರುವನು. ಆಗ, ಹೀಗೆ ಅನ್ನುತ್ತಾನೆ. - ನಾನು ನಿತ್ಯ ಇದೇ ಪ್ರಕಾರ ಇರುವಂಥವನು, ಸತ್ಯವಾಗಿ ಎಂದೂ ನಾನು ವಿಕಾರ ಹೊಂದಲೇ ಇಲ್ಲ. ಮತ್ತು ಆ ಸಮಯದಲ್ಲಿ ಜಗತ್ಪ್ರಪಂಚವನ್ನು ನೋಡೋಣ. ಅಂದರೆ ಅದು ಎಲ್ಲೆಲ್ಲಿಯೂ ಇರುವದಿಲ್ಲ. ತೋರುವುದಿಲ್ಲ , ಇಷ್ಟೇ ಅಲ್ಲ , ಈ ಜಗತ್ತು ಎಂದೂ ಆಗಿದ್ದಿಲ್ಲ, ಮತ್ತು ಆಕಾಶದೊಳಗೆ ಕಾಣಿಸುವ ನಗರದಂತೆ ಸಂಭವಿಸಲಿಕ್ಕೆ ಸಾಧ್ಯವೇ ಇಲ್ಲ,  ಎಂಬಂತೆ ಕಾಣಿಸುವದು. ಚಿತ್ತವು ಸ್ವರೂಪದಲ್ಲಿಯೇ ಇರುತ್ತಿದ್ದು, ಒಂದು ವೇಳೆ ಕಣ್ಣು ತೆರೆದು ಜಗತ್ತನ್ನು ನೋಡಿದರೆ, ತನ್ನ ಸ್ವರೂಪದ ಹೊರತು ಅದಕ್ಕೆ ಬೇರೆಯಾಗಿ ಏನೇನೂ ಕಾಣಿಸದು. ಹ್ಯಾಗೆ ತನ್ನ ದೇಹವೋ ಹಾಗೆಯೇ ಜಗತ್ತೆಲ್ಲ ಕಾಣಿಸುವದು. ಸ್ತ್ರೀ, ಪುತ್ರ, ಧನ ಇತ್ಯಾದಿಗಳೆಲ್ಲವೂ ಆತ್ಮಕಾರ ತೋರುವವು. ಅಲ್ಲಿಂದ ಮನಸ್ಸು ನಿರ್ಗುಣದಲ್ಲಿ ಹಚ್ಚಿದರೆ, ಸುಖದಿಂದ ತುರ್ಯಾತೀತ ಅವಸ್ಥೆಯು ಪ್ರಾಪ್ತವಾಗುವದು; ಈ ಸ್ಥಿತಿಯಲ್ಲಿ ಶುದ್ಧ ಜ್ಞಪ್ತಿರೂಪ ಸತ್ತೆಯ ಹೊರತು, ಅಹಂಭಾವವು ಏನೇನೂ

ಉಳಿಯುವದಿಲ್ಲ. ಯಾವ ಈ ಸ್ಥಿತಿಯ ಅನುಭವವಿರುವದೋ ಅದಕ್ಕೆ ಜ್ಞಾನವೆನ್ನುವರು. ಈ ಅಪೂರ್ವ ಅನುಭವದಿಂದ ಪೂರ್ಣಾನಂದವು ಹೃದಯದಲ್ಲಿ ಪ್ರಕಟವಾಗುವದು. ಅಂಥಾ ಈ ಆನಂದವು ಸಾಧ್ಯವಾಗಬೇಕಾದರೆ,ಸದ್ಗುರುವಿಗೆ ಶರಣು ಹೋಗಬೇಕು. ಆಂತರ್ಯದೊಳಗೆ ಆತನು ಕೃಪಾ ಮಾಡಿದ್ದಾದರೆ, ಬ್ರಹ್ಮರೂಪವು ಪ್ರಾಪ್ತಿಯಾಗುವದು. ಹೇ ಶ್ರೋತಾ ಜನರುಗಳಿರಾ, ಅತಿ ಮಧುರವಾದ ಕಥೆಯನ್ನು ಶ್ರವಣ ಮಾಡುವಂಥವರಾಗಿರಿ. ಅದರ ಶ್ರವಣ ಮಾತ್ರದಿಂದ ಮನನವಾಗಿ, ಸ್ವರೂಪ ಸಾಕ್ಷಾತ್ಕಾರವು  ಶೀಘ್ರವಾಗುವದು. ಪುಣ್ಯವತಿಯಾದ ಹುಬ್ಬಳ್ಳಿ ನಗರದೊಳಗೆ, ರಮಾನಾಥನೆಂಬ ಬ್ರಾಹ್ಮಣ ಗೃಹಸ್ಥನಿರುವನು. ಆತನಿಗೆ ಕೃಷ್ಣಾಬಾಯಿ ಎಂಬಾಕೆ ಪತ್ನಿ  ಇರುವಳು. ಅವರ ಮಗನ ಉಪನಯನ ಕಾರ್ಯವನ್ನು ಸಂಪಾದಿಸುವದಕ್ಕೋಸ್ಕರವಾಗಿ, ಮನೆಯಲ್ಲಿ ತಯಾರಿ ನಡೆಯುತ್ತಿರುವಾಗ್ಗೆ, ಕೃಷ್ಣಾಬಾಯಿ ಬಂದು, ಪತಿಯನ್ನು ಕುರಿತು ಅನ್ನುತ್ತಾಳೆ- “ನಮ್ಮ ಪುತ್ರನ ಉಪನಯನ ಕಾರ್ಯವನ್ನು ನಡಿಸಬೇಕಾಗುತ್ತದೆ. ಯಾಕೆಂದರೆ, ಈ ಪುತ್ರನು

ಹುಟ್ಟುವ ಪೂರ್ವದಲ್ಲಿ ಎರಡು ಕೂಸುಗಳು ಹುಟ್ಟಿದ ಕೂಡಲೇ ತೀರಿಕೊಂಡವು. ಆಗ ಮಕ್ಕಳು ಹ್ಯಾಗೆ ಬದುಕುವವು ಎಂಬ ಮಹಾ ಚಿಂತೆ ಉತ್ಪನ್ನ ವಾಯಿತು. ಆಗ ಯಾರೋ ಒಬ್ಬರು ಹೇಳಿದರು - "ಶ್ರೀ ಸಿದ್ಧಾರೂಢ ಚರಣಗಳಿಗೆ ಪ್ರಾಪ್ತವಾಗಿ ಪ್ರಾರ್ಥಿಸಿದ್ದಾದರೆ ಅವರ ಕೃಪೆಯಿಂದ ಮಕ್ಕಳು ಬದುಕುವವು". ಈ ಕೀರ್ತಿಯನ್ನು ನಾನು ಕೇಳಿ, ಈ ನಮ್ಮ ಪುತ್ರನು ಹೊಟ್ಟೆಯಲ್ಲಿರುವಾಗ ನಾನು ಸಿದ್ಧಾಶ್ರಮಕ್ಕೆ ಹೋಗಿ ಪ್ರಾರ್ಥಿಸಿದೆನು - "ಹೇ ಸದ್ಗುರುನಾಥಾ, ನನಗೆ ಪುತ್ರನನ್ನು ದಯಪಾಲಿಸಿ, ಆತನನ್ನು ದೀರ್ಘಾಯು ಮಾಡಿದ್ದಾದರೆ, ಆತನ ಉಪನಯನ ಕಾಲದಲ್ಲಿ ನಿಮ್ಮನ್ನು ಗೃಹಕ್ಕೆ ಕರಿಸಿ ಪೂಜೆಯನ್ನು ಮಾಡಿ, ಸಂತೋಷಪಡಿಸುವೆನು. ಆದ್ದರಿಂದ ನನ್ನ ಮೇಲೆ ಕೃಪಾಮಾಡಿ ನನ್ನ ಮನೋರಥವನ್ನು ಪೂರ್ಣ ಮಾಡಬೇಕು". ಈ ಪ್ರಕಾರದ ನನ್ನ ವಚನವನ್ನು ಕೇಳಿ, ಆ ದಯಾಳುವಾದ ಸದ್ಗುರುನಾಥನು, ನನ್ನ ಮೇಲೆ ಕೃಪೆ ಮಾಡಿ, ಆಶೀರ್ವಾದ ಕೊಟ್ಟನು; ಅದರಿಂದ ನನಗೆ ಆನಂದವಾಗಿ, ಆತನಿಗೆ ನಮಸ್ಕರಿಸಿ ನಾನು ಹೊರಟು ಬಂದೆನು, ಆ ಸಿದ್ಧಾರೂಢ

ಸದ್ಗುರು ಕೃಪೆಯಿಂದಲೇ ಇಲ್ಲಿ ತನಕ ಮಗನು ಬದುಕಿರುತ್ತಾನೆ. ಆದ್ದರಿಂದ ಈ ಉಪನಯನ ಮಹೋತ್ಸವ ಆರಂಭ ಮಾಡುವದಕ್ಕಿಂತಲೂ ಮೊದಲು, ಸಿದ್ಧಾರೂಢರಿಗೆ ಗೃಹಕ್ಕೆ ಕರೆದುಕೊಂಡು ಬಂದು ಷೋಡಶೋಪಚಾರಗಳಿಂದ ಪೂಜಿಸಬೇಕು. ಅತ್ಯಾದರದಿಂದ ಪೂಜಿಸಿ, ಅವರಿಗೆ ವಸ್ತ್ರ ಕಾಣಿಕಾದಿಗಳನ್ನು ಸಮರ್ಪಿಸಿ, ಆಮೇಲೆ ಭೋಜನ ಮಾಡಿಸಿ, ಮಠಕ್ಕೆ ತಿರುಗಿ ಕಳುಹಿಸಬೇಕಾಗಿರುತ್ತದೆ. ಈ ಪ್ರಕಾರ ಪೂಜಾ ಮಾಡಿದ್ದಾದರೆ, ಪುತ್ರನಿಗೆ ಸರ್ವ ಕಲ್ಯಾಣ ಪ್ರಾಪ್ತವಾಗುವದು. ಆದ್ದರಿಂದ ನೀವು ಇದನ್ನು ಮನಸ್ಸಿನೊಳಗೆ ವಿಚಾರ ಮಾಡಿಕೊಂಡು, ಹಾಗೆಯೇ ನಡಿಸಬೇಕು ಎಂದು ನನ್ನ ಪ್ರಾರ್ಥನೆಯದೆ" ಅಂದಳು. ಪತ್ನಿಯ ಈ ಪ್ರಕಾರದ ವಚನವನ್ನು ಕೇಳಿ ರಮಾನಾಥನು ಕ್ಷೋಭೆಗೊಂಡು, ಅನ್ನುತ್ತಾನೆ- " ಬೇಡುವದಕ್ಕೆ ಇಲ್ಲಿ ಯಾವ ದೇವರೂ ನಿನಗೆ ಸಿಗಲಿಲ್ಲವೇನು ? ನಾವು ಬ್ರಾಹ್ಮಣರಿದ್ದು ಆ ಶೂದ್ರನಿಗೆ ಹರಿಕೆ ಹೊತ್ತಿ. ನಾನು ಆತನನ್ನು ಮನೆಯೊಳಗೆ ಕರೆದುಕೊಂಡು ಬಂದದ್ದಾದರೆ, ಬ್ರಾಹ್ಮಣರೆಲ್ಲ ನನಗೆ ನಗುವರು. ಈಗ ನಿನ್ನ ಈ

ಮೂರ್ಖತ್ವವನ್ನು ಬಿಟ್ಟುಬಿಡು. ನಾವು ಇಲ್ಲೇ ದೇವರ ಪೂಜೆಯನ್ನು ಮಾಡುವೆವು', ಅಂದದ್ದು ಕೇಳಿ, ಕೃಷ್ಣಾಬಾಯಿಯು ಬಹಳ ಆಗ್ರಹ ಮಾಡಿದಾಗ್ಯೂ ಆತನು ಕೇಳಲಿಲ್ಲ. ಆಗ್ಗೆ ಕೃಷ್ಣಾಬಾಯಿಯು, ಏಕಾಂತದಲ್ಲಿ ಹೋಗಿ ಕಣ್ಣಿನಿಂದ ನೀರು ಸುರಿಸುತ್ತಾ, ಸದ್ಗುರು ಪ್ರಾರ್ಥನೆ ಮಾಡುವಂಥವಳಾದಳು - "ಹೇ, ದಯಾಳ್ ಸಿದ್ಧಾರೂಢನೇ, ನೀನೇ ಪ್ರಾಪ್ತಗಾಗಿ, ನನ್ನ ಹರಕೆ ತೀರಿಸಿಕೊಳ್ಳುವಂಥವನಾಗು. ನನ್ನ ಪತಿಯು ಸಮ್ಮತಪಡುವದಿಲ್ಲ. ಆದ್ದರಿಂದ ಮನೆಗೆ ಕರಿಸಿಕೊಂಡು ಪೂಜಾ ಮಾಡಲಿಲ್ಲವೆಂದು ನಮ್ಮ ಮೇಲೆ ಕ್ಷೋಭಿಸದೆ, ನನ್ನ ಪುತ್ರನನ್ನು ಬದುಕಿಸಬೇಕಾಗಿರುತ್ತದೆ". ಕೃಷ್ಣಾಬಾಯಿಯು ಹೀಗನ್ನುತ್ತಾ, ಹೃದಯದಲ್ಲಿ ಶ್ರೀ ಸಿದ್ಧಾರೂಢರ ಮೂರ್ತಿಯನ್ನು ಸ್ಮರಿಸುವಂಥವಳಾದಳು. ಆ ಕೂಡಲೆ, ಅಲ್ಲೇ ಸದ್ಗುರುವು ಪ್ರಸನ್ನವದನದಿಂದ ಆಕೆಗೆ ಆಶ್ವಾಸನ ಕೊಡುವಂಥವನಾದನು, ಮತ್ತು ಆಕೆಯು ಸಮಾಧಾನ ಹೊಂದಿದಳು. ಉಪನಯನಾರಂಭದಲ್ಲಿ ದೇವರ ಪೂಜಾ ಮಾಡಬೇಕೆಂದು, ರಮಾನಾಥನು ಪೂಜಾ ಸಾಮಗ್ರಿಗಳನ್ನು

ತೆಗೆದುಕೊಂಡು, ದೇವಗೃಹಕ್ಕೆ ಪ್ರಾಪ್ತನಾಗಲು, ಅಲ್ಲಿ ಒಂದು ಚಮತ್ಕಾರವನ್ನು

ಕಂಡನು. ಮಂಟಪದೊಳಗೆ ಎಲ್ಲಿ ಕೃಷ್ಣಮೂರ್ತಿಯಿತ್ತೋ ಅಲ್ಲೆ ಅದು ಆರೂಢಮೂರ್ತಿಯಾಗಿ ಕಾಣಿಸುತ್ತಿರುವದು. ಈ ವೈಚಿತ್ರ್ಯ ವನ್ನು ಕಂಡು, ಆತನು ಭ್ರಮೆ ಹೊಂದಿದನು. ಆಗ ಆತನು ಮನಸ್ಸಿನಲ್ಲಿ ವಿಚಾರಿಸಿದನು - "ಇದು ನನ್ನ ಪತ್ನಿಯ ಕೆಲಸವಾಗಿರಬೇಕು. ತನ್ನ ಮನೋರಥವನ್ನು ಪೂರೈಸಿಕೊಳ್ಳುವ ಉದ್ದಿಶ್ಯವಾಗಿ ಕೃಷ್ಣಮೂರ್ತಿಯನ್ನು ತೆಗೆದು, ಆರೂಢ ಮೂರ್ತಿಯನ್ನು ಆಕೆಯು ಸ್ಥಾಪಿಸಿರಬಹುದು ಮತ್ತು ಹೀಗೆ ತನ್ನ ಇಚ್ಛೆಯನ್ನು ಪೂರ್ಣಮಾಡಿಕೊಳ್ಳಲಿಕ್ಕೆ ನೋಡುತ್ತಾಳೆ' ಎಂದು ಚಿಂತಿಸಿ, ಕೃಷ್ಣಾಬಾಯಿಗೆ ಗಟ್ಟಿಯಾಗಿ ಒದರಿದ ಕೂಡಲೇ, ಆಕೆಯು ಬಂದಳು. ಆಗ್ಗೆ ಸಿಟ್ಟಿನಿಂದ ಕೇಳುತ್ತಾನೆ - "ಭ್ರಷ್ಟೇ, ನೀನು ಕೃಷ್ಣ ಮೂರ್ತಿಯನ್ನು ತೆಗೆದು ಸಿದ್ಧಮೂರ್ತಿಯನ್ನು ಸ್ಥಾಪಿಸಿರುವಿಯೇ ?" ಎನ್ನಲಾಗಿ, ಆಕೆಯು "ನಾನೇನೂ ಅರಿಯೆ," ಎಂದು ಯಥಾರ್ಥವಾಗಿ ನುಡಿದಳು, ಮತ್ತು ಈ ಚಮತ್ಕಾರವನ್ನು ನೋಡಿ ಆಶ್ಚರ್ಯಪಟ್ಟು, ಆ

ದಯಾಘನನಾದ ಸಿದ್ಧ ಸಮರ್ಥನು ಸತ್ಯವಾಗಿ ಪ್ರಾಪ್ತನಾದನು, ಅಂದುಕೊಂಡಳು. ಆಗ್ಗೆ ಆತನು ಸಂಪುಷ್ಟವನ್ನು ತೆಗೆದು ನೋಡುತ್ತಾನೆ, ಅದರೊಳಗಿರುವ ಗಣಪತಿ ಮೂರ್ತಿ, ವಿಠ್ಠಲ ಮೂರ್ತಿ, ಸಾಲಿಗ್ರಾಮ ಎಲ್ಲವೂ ಸಿದ್ಧಾರೂಢನೇ ಆಗಿ ಕಾಣಿಸುತ್ತಿರುವವು. ಇದನ್ನು ನೋಡಿ ರಮಾನಾಥನು ಆಶ್ಚರ್ಯಚಕಿತನಾಗಿ, - 'ಇದು ನಿಜವಾಗಿ ಈಶ್ವರೀ ಮಾಯಾ ಇರುವುದು. ಸಿದ್ಧಾರೂಢರು ಸತ್ಯವಾಗಿ ಅವತಾರ ಪುರುಷರಿರುವರು. ಇದರೊಳಗೆ ಏನೇನೂ ಸಂಶಯವಿಲ್ಲ. ಹೇ ಸ್ತ್ರೀಯೇ ನಾನು ವ್ಯರ್ಥವಾಗಿ ಸಿಟ್ಟಿಗೆದ್ದೆ. ನೀನೇ ಸಿದ್ಧಾರೂಢರ ಅವತಾರವನ್ನು ತಿಳಿದುಕೊಂಡಿರುವಿ. ಮತ್ತು ಧನ್ಯಳಾದಿ. ನಾನು ಈಗಲೇ ಸಿದ್ಧಾಶ್ರಮಕ್ಕೆ ಹೋಗಿ, ಸದ್ಗುರುಗಳನ್ನು ಕರೆದುಕೊಂಡು ಬರುವೆನು, ಮತ್ತು ನಿನ್ನ ಇಚ್ಛೆ ಹ್ಯಾಗಿತ್ತೋ ಹಾಗೆಯೇ ಪೂಜಿಸುವೆನು', ಎಂದನು. ಈ ಪ್ರಕಾರ ಅಂದು, ತನ್ನ ಇಷ್ಟ ಮಿತ್ರರನ್ನು ಮನೆಗೆ ಕರಕೊಂಡು ಬಂದು, ಎಲ್ಲಾ ದೇವರ ರೂಪದಿಂದ ಸಿದ್ದಾರೂಢನೇ ಇರುವುದನ್ನು ತೋರಿಸಿ ಎನ್ನುತ್ತಾನೆ - "ಸಿದ್ಧಾರೂಢ ಸದ್ಗುರುಗಳ ಸತ್ತಾ

ಎಂಥಾದ್ದದೆ! ಎಲ್ಲಾ ದೇವರುಗಳಾಗಿ ತಾನೇ ಇದ್ದಾನೆ. ನಾವು ಆತನ ಮಹಿಮೆಯನ್ನು ತಿಳಿಯದೆ, ವ್ಯರ್ಥವಾಗಿ ಕರ್ಮ ಮಾರ್ಗವನ್ನು ಅನುಸರಿಸಿದೆವು. ಈಗಲಾದರೂ ಆ ಸದ್ಗುರುರಾಯನಿಗೆ ಶರಣು ಹೋಗಿ, ಸದ್ಭಾವದಿಂದ ಆತನ ಚರಣಗಳನ್ನು ಹಿಡಿದು, ಪ್ರೇಮದಿಂದ ಆತನನ್ನು ಪೂಜಿಸಿದ್ದಾದರೆ, ನಾವು ಈ ಲೋಕದಲ್ಲಿ ಧನ್ಯರಾಗುವೆವು'. ಈ ಪ್ರಕಾರ ಅಂದು, ರಮಾನಾಥನು ಸಿದ್ಧಾಶ್ರಮಕ್ಕೆ ಹೋಗಿ ಶ್ರೀ ಸಿದ್ಧಾರೂಢರನ್ನು ಪ್ರಾರ್ಥಿಸಿ, ಸ್ವಗೃಹಕ್ಕೆ ಕರೆದುಕೊಂಡು ಬರುವಂಥವನಾದನು. ಕೃಷ್ಣಾಬಾಯಿಯು ಸದ್ಗುರುಗಳಿಗೋಸ್ಕರ ದಿವ್ಯ ಪೀಠವನ್ನು ಹಾಕಿ, ಅವರ ದಾರಿ ನೋಡುತ್ತಿದ್ದಳು. ಸಿದ್ಧರನ್ನು ನೋಡಿದ ಕೂಡಲೇ, ಆಕೆಗೆ ಉತ್ಕಟ ಪ್ರೇಮ ಉತ್ಪನ್ನವಾಯಿತು. ಆಗ್ಗೆ ಸಿದ್ಧಾರೂಢರನ್ನು ಆಸನದ ಮೇಲೆ ಕುಳ್ಳಿರಿಸಿ, ತನ್ನ ಮಸ್ತಕವನ್ನು ಆತನ ಚರಣಗಳಲ್ಲಿಟ್ಟು, ನೇತ್ರೋದಕದಿಂದ ಆತನ ಪಾದ ಪ್ರಕ್ಷಾಳನ ಮಾಡುವಂಥವಳಾದಳು. ಅನ್ನುತ್ತಾಳೆ - "ಹೇ ದೀನ ದಯಾಳಾ, ಸಿದ್ಧನಾಥಾ, ದೀನ ಅನಾಥರಾದ ನಮ್ಮನ್ನು

ನೀನು ರಕ್ಷಿಸುತ್ತಿ. ನಾವು ನಿನ್ನ ಮಹಿಮೆಯನ್ನು ತಿಳಿಯಲಾರೆವು. ಆದರೂ ಹೇ ದೀನನಾಥಾ ಕೃಪಾಮಾಡಿದಿ," ಅಂದಳು. ಆಗ್ಗೆ ಎಲ್ಲಾ ಪೂಜಾ ಸಾಮಗ್ರಿಗಳನ್ನು ತೆಗೆದುಕೊಂಡು ಬಂದು, ರಮಾನಾಥನು ಸಿದ್ಧಾರೂಢರ ಚರಣಗಳಿಗೆ ನಮನ ಮಾಡಿದನು, ಆಮೇಲೆ ವೇದವಿಧಿಗನುಸರಿಸಿ, ಯಥಾಸಾಂಗ ರೀತಿಯಿಂದ ಸದ್ಗುರುಗಳನ್ನು ಪೂಜಿಸುವಂಥವನಾದನು. ಎಲ್ಲಾ ಇಷ್ಟ ಮಿತ್ರರನ್ನು ಕೂಡಿಕೊಂಡು ಈ ಪ್ರಕಾರ ಪೂಜಾ ಮಾಡಿ, ನೈವೇದ್ಯ ಸಮರ್ಪಿಸಿ, ವಿಧಿ ಪ್ರಕಾರ ಸಿದ್ಧಾರೂಢರಿಗೆ ಆರತಿ ಬೆಳಗಿದರು. ಆಮೇಲೆ ರಮಾನಾಥನು ಸದ್ಗುರುಗಳಿಗೆ ದಕ್ಷಿಣೆ ಮತ್ತು ಒಂದು ದಿವ್ಯ ಶಲ್ಲೆಯನ್ನು ಸಮರ್ಪಿಸಿ, ಅವರನ್ನು ಗಾಡಿ ಮೇಲೆ ಕೂಡ್ರಿಸಿ, ಸಿದ್ಧಾಶ್ರಮಕ್ಕೆ ಮುಟ್ಟಿಸಿ ಬಂದನು. ಚರಿತ್ರ ಕಥೆ ಇಲ್ಲಿಗೆ ಮುಗಿಯಿತು. ಈಗ ಲಕ್ಷ್ಯಾರ್ಥವನ್ನು ಅವಧರಿಸತಕ್ಕದ್ದು. ರಮಾನಾಥನೇ ಕರ್ಮಠ ಜೀವನು, ಅವನ ಪತ್ನಿಯು ಸದ್ಬುದ್ಧಿ, ಸದ್ಬುದ್ಧಿಯು ಎರಡು ಸಾರಿ ಜ್ಞಾನ ಸ್ಫೂರ್ತಿಯನ್ನು ಪ್ರಸವಿಸಿದಳು. ಆದರೆ ಗುರುಕೃಪೆಯಾಗದೆ

ಇದ್ದರಿಂದ ಕರ್ಮವೆಂಬ ರೋಗವು ಹತ್ತಿ ಸತ್ತುಹೋದವು. ಮೂರನೇ ಬೋಧ ಪುತ್ರನನ್ನು ಹಡಿಯುವ ಮೊದಲು ಸದ್ಗುರುರುವಿಗೆ ಶರಣು ಹೋದಳು. ಸದ್ಗುರುರಾಯನ ಕೃಪೆಯಿಂದ ಬೋಧ ಪುತ್ರನು ಬದುಕಿದನು. ಆಗ ಸದ್ಗುರುವನ್ನು ಅಂತರ್ಯವೆಂಬ ಮನೆಯಲ್ಲಿ ಕರೆದುಕೊಂಡು ಬರಬೇಕಾಗಿ, ಜೀವನಿಗೆ ಸದ್ಬು ಧ್ಧಿಯು ಪ್ರಾರ್ಥಿಸಿದಳು. ಇದನ್ನು ಕೇಳಿ ವೃತ್ತಿಪರ ಜೀವನು ಸಿಟ್ಟಿಗೆದ್ದು - "ನಿವೃತ್ತಿಪರ ಸದ್ಗುರು ನಮಗೆ ವಿಜಾತೀಯನಿರುತ್ತಾನೆ. ಅವನನ್ನು ಒಳಗೆ ತಂದರೆ ನಮ್ಮ ಧರ್ಮ ಮುಳುಗುವುದು." ಎಂದು ಗಲಬಲ ಮಾಡಲಿಕ್ಕೆ ಆರಂಭಿಸಿದರು. ತಿರಸ್ಕಾ ರ ಬುಧ್ಧಿಯಿಂದಾದರೂ, ಆತನ ವೃತ್ತಿ ತದಾಕಾರವಾಗಿ, ಗುರುಮೂರ್ತಿಯನ್ನೇ ಹೃದಯದೊಳಗೆ ಕಾಣುವಂಥವನಾಗಿ, ಆ ವೃತ್ತಿಯು ಸದ್ಗುರುಪಾದದ ಕಡೆಗೆ ತಿರುಗಿತು. ರಾಗ ಬುಧ್ಧಿಯಿಂದಾಗಲಿ, ದ್ವೇಷ ಬುಧ್ಧಿಯಿಂದಾಗಲಿ, ಸದ್ಗುರು ಚಿಂತನವಾದ ಮಾತ್ರದಿಂದ ವೃತ್ತಿ ತದಾಕಾರವಾಗಿ, ಅದರಿಂದ ಪ್ರೇಮ ಉತ್ಪನ್ನವಾಗುವದು. ಗುರು ಚರಣದಲ್ಲಿ ಪ್ರೇಮವು ಹುಟ್ಟಿ, ಸದ್ಗುರುವನ್ನು ಅಂತರ್ಯದಲ್ಲಿ ಕರೆದುತಂದು,

ಪ್ರೇಮಭರದಿಂದ ಆತನನ್ನು ಪೂಜಿಸಿ, ಜೀವನು ಒಳಹೊರಗೂ ಆನಂದದಿಂದ ಭರಿತನಾದನು. ಬೋಧವು ಹೃದಯದಲ್ಲಿ ಸ್ಥಿರವಾದ ಮೇಲೆ ಚಿತ್ತವು ನಿರ್ಮಲವಾಯಿತು. ಅನಂತರ ಸದ್ಗುರುವಿಗೆ ಭಕ್ತಿಯೆಂಬ ದಕ್ಷಿಣೆ ಮತ್ತು ಪ್ರೇಮವೆಂಬ ಸುಂದರವಾದ ಶಲ್ಲೆಯನ್ನು ಜೀವನು ಅರ್ಪಿಸಿದನು. ಈ ಪ್ರಕಾರ ಸದ್ಗುರುವನ್ನು ಪೂಜಿಸಿದ್ದರಿಂದ ಆಂತರ್ಯದೊಳಗೆ ಸಮಾನ ಜ್ಞಾನವು ಸ್ಥಿರವಾಗಿ, ಅಂಥಾ ಜ್ಞಾನದಿಂದ ದ್ವೈತಭಾವವು ಪೂರ್ಣವಾಗಿ ಹಾರಿ ಹೋಗುವದು. ಈ ಸದ್ಗುರುವಿನ ಚಿಂತನ ಮಾಡುವುದರಿಂದ, ಅಥವಾ ಈತನ ಚರಿತ್ರ ಪಠಣದಿಂದ ಮನಸ್ಸು ತದಾಕಾರವಾಗಿ ಸರ್ವತ್ರದಲ್ಲಿಯೂ ತದ್ರೂಪವೇ ಕಾಣಿಸುವದು. ಹೇ ಶ್ರೋತಾ ಜನರುಗಳಿರಾ, ಮುಂದಿನ ಅಧ್ಯಾಯದಲ್ಲಿ ಮಧುರವಾದ ಕಥೆಯನ್ನು ಶ್ರವಣ ಮಾಡುವಂಥವರಾಗಿರಿ. ಅದರ ಶ್ರವಣದಿಂದ ಜಗತ್ರಯದಲ್ಲಿ ಆನಂದ ತುಂಬುವದು. ಎಂಬಲ್ಲಿಗೆ ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಈ ಇಪ್ಪತ್ತೊಂದನೇ

*ಅಧ್ಯಾಯವನ್ನು  ಶಿವದಾಸನು ಶ್ರೀ ಸಿದ್ಧಾರೂಢ ಸದ್ಗುರುಗಳ ಚರಣಾರವಿಂದಗಳಲ್ಲಿ ಅರ್ಪಿಸುತ್ತಿರುವನು.*